# ಸರ್ಕಾರಿ ಪ್ರೌಢಶಾಲೆ, ಕೀರ್ಗಳ್ಳಿ, ಮೈಸೂರು ತಾಲೂಕು ಮತ್ತು ಜಿಲ್ಲೆ – 570 026

## ವಾರ್ಷಿಕ ಪಾಠ ಯೋಜನೆ ಹಾಗೂ ಕಾರ್ಯ ಪೂರೈಕೆ ವಿವರ – ಶೈಕ್ಷಣಿಕ ವರ್ಷ– 2019–20

## ತರಗತಿ : 9 ನೆಯ ತರಗತಿ

## ವಿಷಯ : ಪ್ರಥಮ ಭಾಷೆ ಕನ್ನಡ

**ರವೀಶ್ ಕುಮಾರ್ ಬಿ.**
**ಕನ್ನಡ ಭಾಷಾ ಶಿಕ್ಷಕರು**

## ವಾರ್ಷಿಕ ಪಾಠ ಯೋಜನೆ ಹಾಗೂ ಕಾರ್ಯ ಪೂರೈಕೆ ವಿವರ – ಶೈಕ್ಷಣಿಕ ವರ್ಷ– 2019–20

**ತರಗತಿ : 9 ನೆಯ ತರಗತಿ** **ವಿಷಯ : ಪ್ರಥಮ ಭಾಷೆ ಕನ್ನಡ.**

| ಮಾಹೆವಾರು ವಿಷಯದ ಪಾಠ ಯೋಜನೆ | | | | ಕಾರ್ಯ ಪೂರೈಕೆ | | | | | | | |
|---|---|---|---|---|---|---|---|---|---|---|---|
| ತಿಂಗಳು | ದೊರೆಯುವ ಅವಧಿಗಳು | ವಿಷಯಾಂಶಗಳು / ಕಲಿಕಾಂಶಗಳು | ಪಾಠ ಬೋಧನೆಗೆ / ಕಲಿಕೆಗೆ ನಿಗದಿಪಡಿಸಿದ ಅವಧಿಗಳು | ನಿಗದಿಪಡಿಸಿದ ಅವಧಿಯಲ್ಲಿ ಪಾಠ ಪೂರ್ಣಗೊಳಿಸಲಾಯಿತೇ? ಇಲ್ಲವೇ? | ನಿಗದಿಪಡಿಸಿದ ಅವಧಿಯಲ್ಲಿ ಪಾಠ ಪೂರ್ಣಗೊಳಿಸಲಾಗದಿದ್ದರೆ ಕಾರಣ. | ಪಾಠ ಪೂರ್ಣಗೊಳಿಸಲು ಕೈಗೊಂಡ ಕ್ರಮಗಳು | ಗೃಹಪಾಠ ನೀಡಿದ್ದು. | ಗೃಹಪಾಠ ನೋಡಿದ್ದು. | ನಡೆಸಿದ ಘಟಕ ಪರೀಕ್ಷೆಗಳು | ವಿಷಯ ಶಿಕ್ಷಕರ ಸಹಿ | ಮುಖ್ಯ ಶಿಕ್ಷಕರ ಸಹಿ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| **ಜೂನ್ 2019** | **25** | **ಸೇತುಬಂಧಕಾರ್ಯಕ್ರಮ**<br>1. ನೈದಾನಿಕ ಪರೀಕ್ಷೆ<br>2. ಪರಿಹಾರ ಬೋಧನೆ<br>3. ಸಾಫಲ್ಯ ಪರೀಕ್ಷೆ | **18** | | | | | | | | |
| | | **<u>ಗದ್ಯ – 1. ಕನ್ನಡ ಮೌಲ್ವಿ (ಸಣ್ಣಕಥೆ) – ಗೊರೂರು ರಾಮಸ್ವಾಮಿ ಅಯ್ಯಂಗಾರ್</u>**<br>1. 'ಕನ್ನಡ ಸಣ್ಣಕಥೆಗಳು' ಸಾಹಿತ್ಯ ಪ್ರಕಾರದ ಪರಿಚಯ.<br>2. ಲೇಖಕ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಜೀವನ ಸಾಧನೆಗಳ ಪರಿಚಯ.<br>3. ಗೊರೂರರು ಬಸ್ಸಿನಲ್ಲಿ ಪ್ರಯಾಣ ಮಾಡುವ ಸಂದರ್ಭದಲ್ಲಿ ಮುಸಲ್ಮಾನ ಮೌಲ್ವಿಯಂತೆ ಕಾಣುತ್ತಿದ್ದವನು ಕೈಯಲ್ಲಿ ಕುಮಾರವ್ಯಾಸ ಭಾರತ ಗ್ರಂಥ ಹಿಡಿದಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುವುದು.<br>'ಹುಸೇನ ಕೃಷ್ಣ'ನ ನೆನೆಪು. ಬಸ್ಸಿನಲ್ಲಿ ಭೇಟಿಯಾದ ಮೌಲ್ವಿಯ ಪರಿಚಯ. | **08** | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| | | 4. ಮೌಲ್ವಿಯು ಕನ್ನಡ ಕಲಿತ ಬಗೆಗಿನ ವಿವರಣೆ. ರಾಮಾಯಣ – ಮಹಾಭಾರತ ಅಧ್ಯಯನದ ಬಗೆಗೆ ವಿವರಣೆ – ಸರ್ವಧರ್ಮ ಸಂದೇಶ.<br>5. ಮೌಲ್ವಿ ಅವರು ಉತ್ತಮ ಉಪಾಧ್ಯಾಯರಾಗಿ ಸೇವೆ ಹಾಗೂ ಕನ್ನಡದ ಮೇಲಿನ ಅಭಿಮಾನ. ಎದುರಿಗಿರುವವರು ಗೊರೂರರು ಎಂಬುದು ತಿಳಿದು ಸಂತೋಷ. ಪರಸ್ಪರ ಪರಿಚಯ<br>6. ಪುನರಾವರ್ತನೆ – ಕನ್ನಡ ಸಂಧಿಗಳು<br>7. ಪುನರಾವರ್ತನೆ – ಸಮಾಸಗಳು – ತತ್ಪುರುಷ, ಕರ್ಮಧಾರಯ, ದ್ವಿಗು.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | | | | | | | | | | |
| **ಜುಲೈ 2019** | **26** | **ಪದ್ಯ – 1. ಹೊಸಹಾಡು (ಭಾವಗೀತೆ) – ಕಯ್ಯಾರ ಕಿಞ್ಞಣ್ಣ ರೈ**<br>1. ಭಾವಗೀತೆಗಳ ಬಗೆಗೆ ಪರಿಚಯ.<br>2 ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಜೀವನ ಸಾಧನೆಗಳ ಪರಿಚಯ<br>3. ನವಚೈತನ್ಯವನ್ನು ನೀಡುವ ಹಾಡು ಹೊರಹೊಮ್ಮಬೇಕು ಎನ್ನುವ ಭಾವ.<br>4. ಲೋಕದಲ್ಲಿ ಜಾತ್ಯತೀತ ಮನೋಭಾವ ಮೂಡಿಸುವ ಹಾಡು ಹೊರಹೊಮ್ಮಬೇಕು ಎನ್ನುವ ಭಾವ.<br>4. ಹಾಡಿನ ನುಡಿಗುಂಡುಗಳು ಎಲ್ಲೆಡೆ ಹಾರಿ, ಭಯದ ಬೆನ್ನಟ್ಟಬೇಕು ಎನ್ನುವ ಭಾವ.<br>5. ಭಾರತೀಯರೆಲ್ಲರೂ ಧ್ವನಿಗೂಡಿಸುವ ಮೂಲಕ ಹಾಡು ಎಲ್ಲೆಡೆ ಪ್ರತಿಧ್ವನಿಸಬೇಕು ಎನ್ನುವ ಭಾವ.<br>6. ಜಡನಿದ್ರೆ ಹೋಗಿ, ಬಾನು – ಭುವಿ ಬೆಳಗಿ, ಕ್ರಾಂತಿ ಕಿಡಿ ಕೆರಳಬೇಕು ಎನ್ನುವ ಭಾವ.<br>7. ಪುನರಾವರ್ತನೆ – ಅಲಂಕಾರಗಳು – ಉಪಮಾಲಂಕಾರ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | | |

| | | | | | | | | | | | |
|---|---|---|---|---|---|---|---|---|---|---|---|
| **ಜುಲೈ 2019** | | <u>**ಗದ್ಯ –2. ಬೆಡಗಿನ ತಾಣ ಜಯಪುರ (ಪ್ರವಾಸ ಕಥನ) – ಕೆ. ಶಿವರಾಮ ಕಾರಂತ**</u><br>1. ಪ್ರವಾಸ ಕಥನ ಸಾಹಿತ್ಯ ಪ್ರಕಾರದ ಪರಿಚಯ.<br>2. ಲೇಖಕ ಕೆ. ಶಿವರಾಮ ಕಾರಂತ ಅವರ ಜೀವನ ಸಾಧನೆಗಳ ಪರಿಚಯ.<br>3. ಲೇಖಕರು ಜಯಪುರದಲ್ಲಿರುವ ಗೆಳೆಯ ರೈ ಮನೆಗೆ ನೀಡಿದ ಭೇಟಿ.<br>4. ಜಯಪುರದ ಬೀದಿಗಳು ಹಾಗೂ ಜನರ ಬಣ್ಣದ ಉಡುಪುಗಳ ವರ್ಣನೆ.<br>5. ಅಂಬೇರಾ ಬೆಟ್ಟದ ಪರಿಸರದ ವರ್ಣನೆ.<br>6. ಕೋಟೆಯ ಒಳಗಿನ ಅರಮನೆಯ ಹಾಗೂ ಮೀರಾಬಾಯಿ ದೇವಾಲಯದ ವರ್ಣನೆ.<br>7. ಜಂತ್ರ ಮಂತ್ರ ಖಗೋಳ ವೀಕ್ಷಣಾಲಯದ ಪರಿಚಯ ಹಾಗೂ ಜಯಪುರದ<br>ಜನಪದ ನೃತ್ಯ ಕಾರ್ಯಕ್ರಮದ ವಿವರ.<br>8. ಸಂಸ್ಕೃತ ಸಂಧಿಗಳು – ಸ್ವರ ಸಂಧಿಗಳು – ಸವರ್ಣದೀರ್ಘ ಮತ್ತು ಗುಣ ಸಂಧಿಗಳು<br>9. ಸಮಾಸಗಳು – ಅಂಶಿ ಮತ್ತು ದ್ವಂದ್ವ ಸಮಾಸಗಳು.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |
| **ಜುಲೈ 2019** | | **ಪದ್ಯ– 2. ಪಾರಿವಾಳ (ಕಥನ ಕವನ) – ಸು. ರಂ. ಎಕ್ಕುಂಡಿ**<br>1. ಕಥನ ಕವನ ಸಾಹಿತ್ಯ ಪ್ರಕಾರದ ಪರಿಚಯ.<br>2. ಕವಿ ಸು. ರಂ. ಎಕ್ಕುಂಡಿ ಅವರ ಜೀವನ ಸಾಧನೆಗಳ ಪರಿಚಯ.<br>3. ದಟ್ಟ ಕಾಡಿನಲ್ಲಿದ್ದ ಮುದ್ದು ಬಿಳಿ ಪಾರಿವಾಳಗಳ ಜೋಡಿಯ ಸುಖ ಸಂಸಾರದ ವರ್ಣನೆ.<br>4. ಪಾರಿವಾಳಗಳು ಮುದ್ದು ಮರಿಗಳ ಜೊತೆಯಲ್ಲಿ ಆನಂದದಿಂದ ಇರುವುದು. ಮುದ್ದು ಮರಿಗಳು ಬೇಡನ ಬಲೆಗೆ ಬೀಳುವ ಸಂದರ್ಭದ ವರ್ಣನೆ.<br>5. ಕುರುಡು ವಾತ್ಸಲ್ಯದಿಂದ ತಂದೆ–ತಾಯಿ ಪಾರಿವಾಳಗಳು ಬೇಡನ ಬಲೆಗೆ ಬೀಳುವುದು. ವ್ಯಾಮೋಹದಿಂದ ಸರ್ವನಾಶ, ತಾಳ್ಮೆಯ ಅಗತ್ಯತೆಯ ಸಂದೇಶ. | **08** | | | | | | | | |

| | | | | | | | | | | | |
|---|---|---|---|---|---|---|---|---|---|---|---|
| **ಜುಲೈ 2019** | | 6. ಅಲಂಕಾರ – ರೂಪಕಾಲಂಕಾರ – ದೃಷ್ಟಾಂತಾಲಂಕಾರ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |
| **ಜುಲೈ 2019** | | **ಪಠ್ಯ ಪೂರಕ ಅಧ್ಯಯನ – ಸ್ವಯಂ ಓದು**<br>**1. ಗುಣ ಸಾಗರಿ ಪಂಢರೀಬಾಯಿ (ಗದ್ಯ) – ಜಯಮಾಲಾ**<br>* ಅಭ್ಯಾಸದ ಚಟುವಟಿಕೆಗಳು | **04** | | | | | | | | |
| **ಜುಲೈ 2019** | | **ಮೊದಲನೆಯ ರೂಪಣಾತ್ಮಕ ಮೌಲ್ಯಮಾಪನ**<br>**– ಸಾಧನ ಪರೀಕ್ಷೆ – 1** | | | | | | | | | |
| **ಆಗಸ್ಟ್ 2019** | **25** | **ಗದ್ಯ – 3. ಧರ್ಮಸಮದೃಷ್ಟಿ (ಶಾಸನ ಸಾಹಿತ್ಯ) –**<br>1. ಶಾಸನ ಸಾಹಿತ್ಯ ಪ್ರಕಾರದ ಪರಿಚಯ<br>2. ರಾಮಾನುಜಾಚಾರ್ಯರ ಗುಣವಿಶೇಷದ ವರ್ಣನೆ.<br>3. ಬುಕ್ಕರಾಯನ ಹಿರಿಮೆಗಳ ವರ್ಣನೆ. ಜೈನರಿಂದ ಶ್ರೀವೈಷ್ಣವರ ಬಗ್ಗೆ ರಾಜನಿಗೆ ದೂರು.<br>4. ಬುಕ್ಕರಾಯನು ನಡೆಸಿದ ಧರ್ಮಸಭೆಯ ವರ್ಣನೆ.<br>5. ಧರ್ಮಸಭೆಯಲ್ಲಿ ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕಾರ್ಯಗಳು ಹಾಗೂ ವಿಧಿಸಿದ ಕಟ್ಟಳೆ ಬಗೆಗೆ ವಿವರ<br>7. ಸಂಸ್ಕೃತ ಸ್ವರ ಸಂಧಿಗಳು – ವೃದ್ಧಿ ಹಾಗೂ ಯಣ್ ಸಂಧಿಗಳು.<br>8. ಹೊಸಗನ್ನಡದ ವಿಭಕ್ತಿ ಪ್ರತ್ಯಯಗಳು<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |

| | | | | | | | | | | | |
|---|---|---|---|---|---|---|---|---|---|---|---|
| ಆಗಸ್ಟ್ 2019 | | **ಪದ್ಯ – 3. ಸಿರಿಯನಿನ್ನೇನ ಬಣ್ಣಿಪೆನು (ನಡುಗನ್ನಡ ಸಾಂಗತ್ಯ) – ರತ್ನಾಕರವರ್ಣಿ**<br>1. ನಡುಗನ್ನಡ ಸಾಂಗತ್ಯ ಪ್ರಕಾರದ ಪರಿಚಯ.<br>2. ಕವಿ ರತ್ನಾಕರವರ್ಣಿಯ ಜೀವನ ಸಾಧನೆಗಳ ಪರಿಚಯ<br>3. ಪೂರ್ವ ಕಥಾ ಪರಿಚಯ.<br>4. ಭರತೇಶನ ಸಾಮರ್ಥ್ಯ ವರ್ಣನೆ.<br>5. ಆಸ್ಥಾನದಲ್ಲಿ ಭರತೇಶನ ವೈಭವ.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |
| ಆಗಸ್ಟ್ 2019 | | **ಗದ್ಯ – 4. ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ (ವ್ಯಕ್ತಿಚಿತ್ರ) – ಸಮಿತಿ ರಚನೆ**<br>1. ವ್ಯಕ್ತಿಚಿತ್ರ ಸಾಹಿತ್ಯ ಪರಿಚಯ ಹಾಗೂ ಅದರ ಪ್ರಾಮುಖ್ಯತೆ.<br>2. ಸ್ಟಾಲಿನ್ ಮತ್ತು ರಾಧಾಕೃಷ್ಣನ್ ಮಾತುಕತೆ.<br>3. ಬಾಲ್ಯ ಮತ್ತು ವಿದ್ಯಾಭ್ಯಾಸ, ವೃತ್ತಿ ಜೀವನ, ಶಿಕ್ಷಕರಾಗಿ ಜನಪ್ರಿಯತೆ.<br>4. ಭಾರತದ ಸಂಸ್ಕೃತಿಯನ್ನು ಎತ್ತಿ ಹಿಡಿದುದು, ಧರ್ಮಗಳ ಅಧ್ಯಯನ.<br>5. ರಾಯಭಾರಿಯಾಗಿ, ರಾಷ್ಟ್ರಪತಿಯಾಗಿ ಮಾಡಿದ ಸಾಧನೆಗಳು.<br>6. ಸಂದ ಗೌರವಗಳು – ರಚಿಸಿದ ಕೃತಿಗಳು.<br>7. ಸಂಸ್ಕೃತ ವ್ಯಂಜನ ಸಂಧಿಗಳು – ಜಶ್ತ್ವ ಮತ್ತು ಶ್ಚುತ್ವ ಸಂಧಿಗಳು<br>8. ಸಮಾಸಗಳು – ಬಹುವ್ರೀಹಿ ಸಮಾಸ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| **ಸೆಪ್ಟೆಂಬರ್ 2019** | **23** | **ಪದ್ಯ – 4. ನಿಯತಿಯನಾರ್ ಮೀಱಿದಪರ್ (ನಡುಗನ್ನಡ ಸಾಹಿತ್ಯ) – ಜನ್ನ**<br>1. ನಡುಗನ್ನಡ ಸಾಹಿತ್ಯ– ಮಹಾಕಾವ್ಯದ ಪರಿಚಯ<br>2. ಕವಿ ಜನ್ನ ಅವರ ಜೀವನ ಸಾಧನೆಗಳ ಪರಿಚಯ<br>3. ಪೂರ್ವಕಥೆಯ ಪರಿಚಯ<br>4. ವಸಂತ ಮಾಸದ ಪ್ರಕೃತಿ ವರ್ಣನೆ.<br>5. ಮಾರಿದತ್ತ ಮತ್ತು ಪುರ ಜನರ ಜಾತ್ರೆಯ ಸಂಭ್ರಮ.<br>6. ಚಂಡಕರ್ಮನಿಂದ ಮಾರಿಗೆ ನರಬಲಿ ನೀಡಲು ಯೋಗ್ಯರಾದ ನರರ ಹುಡುಕಾಟದ ವರ್ಣನೆ.<br>7. ಚಂಡಕರ್ಮನಿಂದ ಅಭಯರುಚಿ ಮತ್ತು ಅಭಯಮತಿಯರ ಬಂಧನ.<br>8. ಅಭಯಮತಿಯು ಅಭಯರುಚಿಗೆ ಮರಣದ ಸಮಯದಲ್ಲಿ ಭಯಬೇಡ. ವಿಧಿಯನ್ನು ಯಾರು ಮೀರಲು ಸಾಧ್ಯವಿಲ್ಲ ಎಂಬ ಸಾಂತ್ವನ.<br>9. ಛಂದಸ್ಸು – ಮಾತ್ರಾಗಣ – ಕಂದಪದ್ಯ ಪರಿಚಯ<br>10. ಹಳಗನ್ನಡದ ವಿಭಕ್ತಿ ಪ್ರತ್ಯಯಗಳು.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | | |
| **ಸೆಪ್ಟೆಂಬರ್ 2019** | | **ಪಠ್ಯ ಪೂರಕ ಅಧ್ಯಯನ – ಸ್ವಯಂ ಓದು**<br>**2. ರಂಜಾನ್ ಸುರಕುಂಬಾ ಮತ್ತು ಸಂಭ್ರಮದ ಜೋಕಾಲಿ (ಗದ್ಯ) – ಕೆ. ನೀಲಾ**<br>* ಅಭ್ಯಾಸದ ಚಟುವಟಿಕೆಗಳು | **04** | | | | | | | | | |
| **ಸೆಪ್ಟೆಂಬರ್ 2019** | | **ಎರಡನೆಯ ರೂಪಣಾತ್ಮಕ ಮೌಲ್ಯಮಾಪನ**<br>**ಸಾಧನಾ ಪರೀಕ್ಷೆ – 2** | | | | | | | | | | |
| **ಸೆಪ್ಟೆಂಬರ್ 2019** | | **ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ** | | | | | | | | | | |

| | | | | | | | | | | | |
|---|---|---|---|---|---|---|---|---|---|---|---|
| **ಅಕ್ಟೋಬರ್ 2019** | **08** | **<u>ಗದ್ಯ – 5. ಪ್ರಜಾನಿಷ್ಠೆ (ಕಾದಂಬರಿ ಸಾಹಿತ್ಯ) – ಸಾ. ಶಿ. ಮರುಳಯ್ಯ</u>**<br>1. ಕಾದಂಬರಿ ಸಾಹಿತ್ಯ ಪ್ರಕಾರದ ಪರಿಚಯ<br>2. ಲೇಖಕ ಸಾ. ಶಿ. ಮರುಳಯ್ಯ ಅವರ ಜೀವನ ಸಾಧನೆಗಳ ಪರಿಚಯ.<br>3. ಹೊಯ್ಸಳ ದೊರೆ ವಿಷ್ಣುವರ್ಧನ ಮತ್ತು ಆದಿಯಮರ ನಡುವಿನ ಯುದ್ಧ. ಹೊಯ್ಸಳರಿಗೆ ಜಯ. ವಿಷ್ಣುವರ್ಧನನು ಗೆದ್ದ ತಲಕಾಡನ್ನು ಲೂಟಿ ಮಾಡದಂತೆ ತನ್ನ ಸೈನಿಕರಿಗೆ ಆದೇಶ ನೀಡುವುದು.<br>4. ಯುದ್ಧದ ಸಂದರ್ಭದಲ್ಲಿ ರಾಣಿ ಶಾಂತಲಾದೇವಿಯು ರಾಜಧಾನಿಯ ಸಂರಕ್ಷಣೆಗೆ ನಿಲ್ಲುವುದು. ಯುವರಾಜ ಉದಯಾದಿತ್ಯನೊಡನೆ ವೇಷಮರೆಸಿಕೊಂಡು ರಾಜ್ಯ ಸಂಚಾರ ಮಾಡುವುದು.<br>5. ಬನದಮ್ಮನ ಹಳ್ಳಿಯಲ್ಲಿ ನಡೆಯುವ ನ್ಯಾಯಸಭೆಯನ್ನು ಮಹಾರಾಣಿಯು ಮರೆಯಲ್ಲಿ ನಿಂತು ವೀಕ್ಷಿಸುವುದು.<br>6. ನ್ಯಾಯ ಸಭೆಯಲ್ಲಿ ಹೊಲದಲ್ಲಿ ದೊರೆತ ಕೊಪ್ಪರಿಕೆ ಬಂಗಾರ ಯಾರಿಗೆ ಸೇರಬೇಕು ಎಂಬುದರ ಬಗೆಗೆ ನಡೆದ ಚರ್ಚೆ. ತೆಗೆದುಕೊಂಡ ತೀರ್ಮಾನ.<br>7. ನ್ಯಾಯಸಭೆಯ ತೀರ್ಮಾನದ ಬಗೆಗೆ ಮಹಾರಾಣಿಯ ಆಕ್ಷೇಪಣೆ. ಗ್ರಾಮದ ಹಣ ಗ್ರಾಮದ ಅಭಿವೃದ್ಧಿಗೆ ವಿನಿಯೋಗವಾಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವುದು.<br>9. ಮಹಾರಾಣಿಯನ್ನು ಕಂಡು ಜನರು ಸಂತಸಗೊಳ್ಳುವುದು ಹಾಗೂ ಗೌರವವನ್ನು ಸಮರ್ಪಿಸುವುದು. ಜನರಿಂದ ದೈವದ ದುಡ್ಡು ದೈವ ಕಾರ್ಯಕ್ಕೆ ವಿನಿಯೋಗವಾಗಲಿ ಎಂದು ದ್ವಾರ ಸಮುದ್ರದಲ್ಲಿ ಕಲಾ ದೇಗುಲವನ್ನು ಕಟ್ಟುವ ನಿರ್ಧಾರ.<br>10. ಸಂಸ್ಕೃತ ವ್ಯಂಜನ ಸಂಧಿಗಳು – ಅನುನಾಸಿಕ ಸಂಧಿ.<br>11. ಸಮಾಸಗಳು – ಕ್ರಿಯಾ ಮತ್ತು ಗಮಕ ಸಮಾಸಗಳು.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| **ನವೆಂಬರ್ 2019** | **21** | **ಪದ್ಯ – 5. ಮರಳಿ ಮನೆಗೆ (ದಲಿತ ಸಾಹಿತ್ಯ) – ಅರವಿಂದ ಮಾಲಗತ್ತಿ**<br>1. ದಲಿತ ಸಾಹಿತ್ಯ ಪ್ರಕಾರದ ಪರಿಚಯ<br>2. ಲೇಖಕ ಅರವಿಂದ ಮಾಲಗತ್ತಿ ಅವರ ಜೀವನ ಸಾಧನೆಗಳ ಪರಿಚಯ.<br>3. ಇಂದಿನ ಪ್ರಕ್ಷುಬ್ಧತೆ ಸ್ಥಿತಿಯಲ್ಲಿ ಬುದ್ಧನ ಆಗಮನದ ಪ್ರಸ್ತುತತೆಯ ವರ್ಣನೆ.<br>4. ಇಂದಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು, ಸತ್ಯ, ಶಾಂತಿ, ಕರುಣೆಗಾಗಿ ಬುದ್ಧನ ಜ್ಞಾನದ ಬೆಳಕು ಅಗತ್ಯ ಎಂಬ ಭಾವ.<br>5. ಬುದ್ಧನ ಉಪದೇಶಗಳು, ಪಂಚಶೀಲ ತತ್ತ್ವ ಹಾಗೂ ಬುದ್ಧನೇ ಸರ್ವಸ್ವ ಎಂಬ ವರ್ಣನೆ.<br>6. ಬಹುಜನರ ಹಿತಕ್ಕಾಗಿ; ಸುಖಕ್ಕಾಗಿ ಜಾತ್ಯತೀತ ಮನೋಭಾವದಿಂದ ಭವ್ಯ ಮಾನವರಾಗಿ ಬಾಳಲು ಬುದ್ಧನ ಆಗಮನ ಅತ್ಯಗತ್ಯ ಎಂಬ ಭಾವ.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | | |
| **ನವೆಂಬರ್ 2019** | | **ಗದ್ಯ – 6. ಜನಪದ ಕಲೆಗಳ ವೈಭವ (ಜನಪದ ಕಲೆ) – ಸಮಿತಿ ರಚನೆ**<br>1. ಜನಪದ ಕಲೆಗಳ ಪರಿಚಯ.<br>2. ಜನಪದ ಕಲೆ – ವೀರಗಾಸೆಯ ವಾದ್ಯ, ವೇಷಭೂಷಣ ವಿಶೇಷ – ವೀರಗಾಸೆಯಲ್ಲಿ ನರ್ತಕರು ಹೇಳುವ ಮಾತುಗಳು, ಏರ್ಪಡಿಸುವ ಸಂದರ್ಭಗಳು<br>3. ಜನಪದ ಕಲೆ – ಕಂಸಾಳೆ – ಕುಣಿತದ ಪರಿಚಯ<br>4. ಜನಪದ ಕಲೆ – ಚರ್ಮವಾದ್ಯ ಪ್ರಧಾನವಾದ ಡೊಳ್ಳು ಕುಣಿತದ ಪರಿಚಯ<br>5. ಜನಪದ ಕಲೆ – ನೃತ್ಯಪ್ರಧಾನ ಕಲೆಯಾದ ಯಕ್ಷಗಾನ ಹಾಗೂ ಅದರ ಸಂಪ್ರದಾಯಗಳ ಪರಿಚಯ.<br>6. ಕ್ರಿಯಾಪದ – ಧಾತುಗಳ ಪರಿಚಯ | **08** | | | | | | | | | |
| **ನವೆಂಬರ್ 2019** | | * ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | | | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| **ನವೆಂಬರ್ 2019** | | **ಪದ್ಯ – 6. ತತ್ತ್ವಪದಗಳು (ತತ್ತ್ವಪದ ಸಾಹಿತ್ಯ) – ಕಡಕೋಳ ಮಡಿವಾಳಪ್ಪ**<br>**– ಶಿಶುನಾಳ ಷರೀಫ್**<br>1. ತತ್ತ್ವಪದ ಸಾಹಿತ್ಯ ಪ್ರಕಾರದ ಪರಿಚಯ.<br>**1. ಗುರುಕರುಣೆ**<br>2. ಕವಿ ಕಡಕೋಳ ಮಡಿವಾಳಪ್ಪ ಅವರ ಜೀವನ ಸಾಧನೆಗಳ ಪರಿಚಯ.<br>3. ಗುರುಕರುಣೆಯ ಮಹತ್ತ್ವ<br>**2. ಬಿದಿರು**<br>4. ಕವಿ ಶಿಶುನಾಳ ಷರೀಫ್ ಅವರ ಜೀವನ ಸಾಧನೆಗಳ ಪರಿಚಯ.<br>5. ಬಹುಪಯೋಗಿ ಬಿದುರಿನ ಬಗೆಗಿನ ವರ್ಣನೆ.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | | |
| **ಡಿಸೆಂಬರ್ 2019** | **26** | **ಪಠ್ಯ ಪೂರಕ ಅಧ್ಯಯನ – ಸ್ವಯಂ ಓದು**<br>**3. ನನ್ನಾಸೆ (ಪದ್ಯ) – ಇಂದುಮತಿ ಲಮಾಣಿ**<br>* ಅಭ್ಯಾಸದ ಚಟುವಟಿಕೆಗಳು | **04** | | | | | | | | | |
| **ಡಿಸೆಂಬರ್ 2019** | | **ಮೂರನೆಯ ರೂಪಣಾತ್ಮಕ ಮೌಲ್ಯಮಾಪನ**<br>**ಸಾಧನಾ ಪರೀಕ್ಷೆ – 3** | | | | | | | | | | |
| **ಡಿಸೆಂಬರ್ 2019** | | **ಗದ್ಯ – 7. ಊರುಭಂಗ (ನಾಟಕ ಸಾಹಿತ್ಯ) ಮೂಲ – ಭಾಸ**<br>**ಅನುವಾದ – ಎಲ್. ಬಸವರಾಜು**<br>**1.** ನಾಟಕ ಸಾಹಿತ್ಯದ ಪರಿಚಯ.<br>2. ಕವಿ ಭಾಸನ ಜೀವನ ಸಾಧನೆಗಳ ಪರಿಚಯ.<br>3. ಅನುವಾದಕ ಎಲ್. ಬಸವರಾಜು ಅವರ ಪರಿಚಯ.<br>4. ಕುರುಕ್ಷೇತ್ರ ರಣಭೂಮಿಯಲ್ಲಿ ನಡೆದ ಭೀಮ – ದುರ್ಯೋಧನರ ಕಾಳಗದ ವರ್ಣನೆ – ಬಲರಾಮನ ಪ್ರವೇಶ.<br>5. ಬಲರಾಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆ. | **08** | | | | | | | | | |

| | | | | | | | | | | | |
|---|---|---|---|---|---|---|---|---|---|---|---|
| **ಡಿಸೆಂಬರ್ 2019** | | 6. ಧೃತರಾಷ್ಟ್ರ, ಗಾಂಧಾರಿಯರ ನಡುವಿನ ಸಂಭಾಷಣೆ.<br>7. ದುರ್ಯೋಧನ ಮತ್ತು ಮಗ ದುರ್ಜಯ ಇವರ ನಡುವಿನ ಸಂಭಾಷಣೆ.<br>8. ದುರ್ಯೋಧನ, ಧೃತರಾಷ್ಟ್ರ, ಗಾಂಧಾರಿಯರ ನಡುವಿನ ಸಂಭಾಷಣೆ.<br>9. ದುರ್ಯೋಧನ – ಅಶ್ವತ್ಥಾಮರ ನಡುವಿನ ಸಂಭಾಷಣೆ.<br>10. ಕ್ರಿಯಾಪದ – ಕಾಲರೂಪಗಳು – ಕಾಲಪಲ್ಲಟ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | | | | | | | | | |
| **ಡಿಸೆಂಬರ್ 2019** | | **ಪದ್ಯ – 7. ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು (ನಡುಗನ್ನಡ ಷಟ್ಪದಿ) – ರಾಘವಾಂಕ**<br>**1**. ನಡುಗನ್ನಡ ಷಟ್ಪದಿ ಕಾವ್ಯದ ಪರಿಚಯ.<br>2. ಕವಿ ರಾಘವಾಂಕನ ಜೀವನ ಸಾಧನೆಗಳ ಪರಿಚಯ.<br>3. ಪೂರ್ವಕಥೆಯ ಪರಿಚಯ<br>4. ಬೇಟೆಗಾಗಿ ಕಾಡಿಗೆ ಬಂದ ಹರಿಶ್ಚಂದ್ರನ ಬಳಿಗೆ ಗಾನರಾಣಿಯರ ಆಗಮನ, ಅವರ ಅಂದಚೆಂದದ ವರ್ಣನೆ, ಅವರಿಂದ ರಾಜನ ಗುಣಗಾನ.<br>5. ತಮ್ಮ ಗಾನನಾಟ್ಯದಿಂದ ಹರಿಶ್ಚಂದ್ರನನ್ನು ಸಂತಸಪಡಿಸಿದ ಗಾನರಾಣಿಯರಿಗೆ ಬಹುಮಾನ ನೀಡುವುದರ ವರ್ಣನೆ.<br>6. ಗಾನರಾಣಿಯರು ಮುತ್ತಿನ ಸತ್ತಿಗೆಯನ್ನು ನೀಡುವಂತೆ ರಾಜನನ್ನು ಕೇಳಿಕೊಳ್ಳುವುದು.<br>7. ಮುತ್ತಿನ ಸತ್ತಿಗೆಯನ್ನು ನೀಡಲು ಸಾಧ್ಯವಿಲ್ಲ ಎಂಬುದಕ್ಕೆ ರಾಜನು ನೀಡಿದ ಕಾರಣಗಳು. ಗಾನರಾಣಿಯರು ಮತ್ತು ರಾಜನ ನಡುವಿನ ಸಂಭಾಷಣೆ.<br>8. ಷಟ್ಪದಿಗಳು – ಭಾಮಿನಿ – ವಾರ್ಧಕ ಷಟ್ಪದಿಯ ಲಕ್ಷಣಗಳ ಪರಿಚಯ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |
| **ಡಿಸೆಂಬರ್ 2019** | | **ಪದ್ಯ ಪೂರಕ ಅಧ್ಯಯನ – ಸ್ವಯಂ ಓದು**<br>**4. ಉರಿದ ಬದುಕು (ಸಣ್ಣಕಥೆ) – ಶಾಂತರಸ**<br>* ಅಭ್ಯಾಸದ ಚಟುವಟಿಕೆಗಳು | **04** | | | | | | | | |

| | | | | | | | | | | | |
|---|---|---|---|---|---|---|---|---|---|---|---|
| **ಜನವರಿ<br>2020** | **25** | **ಗದ್ಯ – 8. ಹರಲೀಲೆ (ನಡುಗನ್ನಡ ರಗಳೆ ಸಾಹಿತ್ಯ) – ಹರಿಹರ**<br>1. ನಡುಗನ್ನಡ ರಗಳೆ ಸಾಹಿತ್ಯ ಪ್ರಕಾರದ ಪರಿಚಯ.<br>2. ಕವಿ ಹರಿಹರ ಅವರ ಜೀವನ ಸಾಧನೆಗಳ ಪರಿಚಯ.<br>3. ಹಿನ್ನೆಲೆಯ ಕಥಾ ಸಾರಾಂಶ.<br>4. ಮಣಮಂದಪುತ್ತೂರಿನ ಉಪವನಕ್ಕೆ ನಂಬಿಯಣ್ಣನ ಆಗಮನ ಹಾಗೂ ಆ ಉಪವನದ ವರ್ಣನೆ.<br>5. ಕೈಲಾಸದಲ್ಲಿ ನಡೆದ ಶಿವ – ಪಾರ್ವತಿಯರ ನಡುವಿನ ಸಂಭಾಷಣೆ.<br>6. ಶಿವನು ಶತವೃದ್ಧನಾಗಿ ವೇಷ ಮರೆಸಿಕೊಂಡು ಮಣಮಂದಪುತ್ತೂರಿನ ಮದುವೆ ಮಂಟಪಕ್ಕೆ ಆಗಮಿಸುವುದು. ಶಿವನ ಶತವೃದ್ಧ ವೇಷದ ವರ್ಣನೆ.<br>7. ಶತವೃದ್ಧ ವೇಷಧಾರಿಯಾದ ಶಿವನು ಮದುವೆಯ ಮಂಟಪದಲ್ಲಿ ಮಾಡಿದ ಅವಾಂತರಗಳು ಹಾಗೂ ಅಲ್ಲಿದ್ದ ಜನರ ಪ್ರತಿಕ್ರಿಯೆಯ ವರ್ಣನೆ.<br>8. ಕರ್ತರಿ ಮತ್ತು ಕರ್ಮಣಿ ಪ್ರಯೋಗ – ಅರ್ಥರೂಪ ಕ್ರಿಯಾಪದಗಳ ಪರಿಚಯ<br>9. ಛಂದಸ್ಸು – ರಗಳೆ ಮತ್ತು ಅದರ ವಿಧಗಳ ಪರಿಚಯ.<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | |
| **ಜನವರಿ<br>2020** | | **ಪದ್ಯ – 8. ಕನ್ನಡ ನಾಡು ನುಡಿ – ಶ್ರೀವಿಜಯ, ನಯಸೇನ, ನೇಮಿಚಂದ್ರ, – ಮಹಲಿಂಗರಂಗ ಮತ್ತು ಆಂಡಯ್ಯ**<br>1. ಹಳಗನ್ನಡ ಸಾಹಿತ್ಯ ಪ್ರಕಾರದ ಪರಿಚಯ<br>2. ಕವಿ ಶ್ರೀವಿಜಯನ ಜೀವನ ಸಾಧನೆಗಳ ಪರಿಚಯ.<br>3. ಕನ್ನಡಿಗರ ಕಾವ್ಯಪ್ರಯೋಗ ಪರಿಣತಿಯ ಬಗೆಗಿನ ಶ್ಲಾಘನೆ.<br>4. ಕವಿ ನಯಸೇನನ ಜೀವನ ಸಾಧನೆಗಳ ಪರಿಚಯ.<br>5. ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಬೆರೆಸಿ ಕಾವ್ಯ ರಚನೆ ಮಾಡುವುದು ಅಸ್ವಾದವಾದುದು ಎಂಬ ಅಭಿಪ್ರಾಯ.<br>6. ಕವಿ ನೇಮಿಚಂದ್ರನ ಜೀವನ ಸಾಧನೆಗಳ ಪರಿಚಯ.<br>7. ಕವಿಗಳ ಕಾವ್ಯ ರಚನಾ ಶಕ್ತಿಯ ಹೆಗ್ಗಳಿಕೆಯ ವರ್ಣನೆ.<br>8. ಕವಿ ಮಹಲಿಂಗರಂಗನ ಜೀವನ ಸಾಧನೆಗಳ ಪರಿಚಯ. | **08** | | | | | | | | |

| | | | | | | | | | | | | |
|---|---|---|---|---|---|---|---|---|---|---|---|---|
| ಜನವರಿ 2020 | | 9. ಕನ್ನಡ ಹಿರಿಮೆಯ ವರ್ಣನೆ.<br>10. ಕವಿ ಆಂಡಯ್ಯನ ಜೀವನ ಸಾಧನೆಗಳ ಪರಿಚಯ.<br>11. ಕನ್ನಡ ನಾಡಿನ ಪ್ರಕೃತಿ ರಮ್ಯತೆಯ ವರ್ಣನೆ.<br>12. ಛಂದಸ್ಸು – ಅಕ್ಷರ ಗಣ – ಖ್ಯಾತ ಕರ್ನಾಟಕಗಳ ಪರಿಚಯ<br>13. ಉತ್ಪಲಮಾಲಾ ಮತ್ತು ಚಂಪಕಮಾಲಾ ವೃತ್ತಗಳ ಪರಿಚಯ<br>* ಅಭ್ಯಾಸದ ಚಟುವಟಿಕೆಗಳು<br>* ನಿಯೋಜಿತ ಕಾರ್ಯಗಳು<br>* ಘಟಕ ಮೌಲ್ಯಮಾಪನ | **08** | | | | | | | | | |
| ಜನವರಿ 2020 | | **ಪಠ್ಯ ಪೂರಕ ಅಧ್ಯಯನ – ಸ್ವಯಂ ಓದು**<br>**5. ಪುಟ್ಟಹಕ್ಕಿ (ಗಝಲ್) – ಜಂಬಣ್ಣ ಅಮರಚಿಂತ**<br>* ಅಭ್ಯಾಸದ ಚಟುವಟಿಕೆಗಳು | **04** | | | | | | | | | |
| ಜನವರಿ 2020 | | **ನಾಲ್ಕನೆಯ ರೂಪಣಾತ್ಮಕ ಮೌಲ್ಯಮಾಪನ**<br>**ಸಾಧನಾ ಪರೀಕ್ಷೆ– 4**<br>(ಆಂತರಿಕ ಮೌಲ್ಯಮಾಪನದ ಅಂಕಗಳ ಕ್ರೋಢೀಕರಣ) | | | | | | | | | | |
| ಫೆಬ್ರವರಿ 2020 | **22** | • ಪುನರಾವರ್ತನೆ<br>• ಪೂರ್ವಸಿದ್ಧತಾ ಪರೀಕ್ಷೆಗಳು<br>• ಉತ್ತರ ಪತ್ರಿಕೆ ವಿಶ್ಲೇಷಣೆ ಹಾಗೂ ಅನುಪಾಲನೆ | **22** | | | | | | | | | |
| ಮಾರ್ಚ್ 2020 | **25** | • ಪುನರಾವರ್ತನೆ<br>• ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ | **25** | | | | | | | | | |
| ಏಪ್ರಿಲ್ 2020 | **08** | **ಫಲಿತಾಂಶ ಘೋಷಣೆ** | **08** | | | | | | | | | |

**ವಿಷಯ ಶಿಕ್ಷಕರ ಸಹಿ** **ಮುಖ್ಯ ಶಿಕ್ಷಕರ ಸಹಿ**